ತೊಳೆದುಕೊಂಡ ನಂತರ, ನಾನೂ ಮಾಸ್ಕ್ ಹಾಕಿದ್ದ ಕಾರಣ ಒಳಗೆ ಹೋಗಲು ಅನುಮತಿ ಸಿಕ್ಕಿತು.

''ಹೇಗಿದೀಯೋ?'' ಎಂದು ಕೇಳಿದೆ.

''ಹೀಗಿದೀನಿ ನೋಡಪ್ಪಾ. 'ಹೋದ್ಯಾ ಪಿಶಾಚಿ ಅಂದ್ರೆ ಬಂತು ಗವಾಕ್ಷೀಲಿ' ಅಂತ ಗಾದೆ ಕೇಳಿಲ್ವೇ? ಈ ಹಾಳು ಕೊರೊನಾ ವೈರಸ್ ಯಾವಾಗ, ಎಲ್ಲಿಂದ, ಒಳಗೆ ನುಗ್ಗುತ್ತೇಂತ ಹೇಳಕ್ಕಾಗಲ್ಲ. ಅದೇ ಯೋಚನೆ'' ಅಂದ.

''ಅಯ್ಯೋ, ಅದಕ್ಯಾಕೆ ಯೋಚನೆ ಮಾಡ್ತೀಯೋ, ಮನೇಲಿರೋ ಎಲ್ಲಾ ಗವಾಕ್ಷಿಗಳನ್ನ ಮುಚ್ಚಿಸಿಬಿಟ್ರೆ ಆಯ್ತಪ್ಪ. ಎಷ್ಟು ಎಚ್ಚರಿಕೆಯಿಂದ ಇದ್ರೂ ಸಾಲ್ದು ಕಣೋ, ಈ ಕಾಲ್ದಲ್ಲಿ!'' ಎಂದು ಹೇಳಿ ಅವನ ಮುಖ ನೋಡಿದೆ.

ನನ್ನ (ಅಪ)ಹಾಸ್ಯಕ್ಕೆ ನನಗೇನೇ ನಗು ಬಂತು. ಅವನ ಮುಂದೆ ನಕ್ಕರೆ ಸಿಟ್ಟಿಗೇಳ್ತಾನೇಂತ ಗೊತ್ತಿತ್ತು. ಕಷ್ಟಪಟ್ಟು ತಡ್ಕೊಂಡೆ. ಆದರೆ, ಅವನು ಮಾತ್ರ ಅದನ್ನು ಗಮನಿಸದೆ ಸುಮ್ಮನೆ ತಲೆ ಹಾಕಿ, ''ಹೌದು ಕಣೋ, ನೀನು ಹೇಳೋದೂ ಸರೀನೇ'' ಅಂದ! ಗವಾಕ್ಷಿ ಮುಚ್ಚಿಸು ಅಂದಿದ್ದಕ್ಕೋ, ಎಚ್ಚರಿಕೆಯಿಂದ ಇರಬೇಕು ಅಂದಿದ್ದಕ್ಕೋ ತಿಳಿಯಲಿಲ್ಲ. ನನಗೆ ತಲೆ ಚಚ್ಚಿಕೊಳ್ಳುವಂತಾಯಿತು.

ಒಂದರ್ಧ ಗಂಟೆ ಕಾಲ ಹರಟೆ ಹೊಡೆದು, ಸೀನನ ಹೆಂಡತಿ ಕೊಟ್ಟ ಕಾಫಿ ಕುಡಿದು ಅವನ ಮನೆಯಿಂದ ಹೊರಟು ಆಚೆ ಬಂದೆ. ಅವನು ಹೇಳಿದ ಗಾದೆ ಮಾತು ನನ್ನ ತಲೆಯಲ್ಲಿ ಗುಂಯ್‌ಗುಡಲು ಶುರು ಮಾಡಿತು. ಈ ಗಾದೆಯನ್ನು ಹಲವರ ಬಾಯಲ್ಲಿ ಹಲವಾರು ಬಾರಿ ಕೇಳಿದ್ದೆ. ಇದೀಗ ಸೀನ ಹೇಳಿದ ಮೇಲೆ, ಯಾಕೋ ಹೊಸದಾಗಿ ಕೇಳಿದ ಹಾಗಾಯಿತು.

ವೇದ ಸುಳ್ಳಾದ್ರೂ ಗಾದೆ ಸುಳ್ಳಾಗಲ್ವಂತೆ. ಗಾದೆಗಳು ಅಂದರೆ ನಮ್ಮ ಹಿಂದಿನವರ ಜೀವನಾನುಭವದ ಸಾರ ಸರ್ವಸ್ವ ಅಂದರೆ ತಪ್ಪಾಗಲಾರದು. ಪ್ರತಿಯೊಂದು ಸಂದರ್ಭಕ್ಕೆ ತಕ್ಕಂತೆ ಪ್ರತ್ಯೇಕ ಗಾದೆಯನ್ನು ಹೇಳುವ ಹಿರಿಯರನ್ನು ಈಗಲೂ ನಾವು ಕಾಣಬಹುದು. ಕನ್ನಡದ ಗಾದೆಗಳ ಬಗ್ಗೆಯೇ ವಿಶೇಷ ಪ್ರಬಂಧವನ್ನು ಬರೆಯಬಹುದು. ಇರಲಿ, ಸದ್ಯಕ್ಕೆ ಸೀನನ ಗಾದೆಯ ಬಗ್ಗೆ ಮಾತ್ರ ಗಮನ ಹರಿಸೋಣ.

''ಹೋದ್ಯಾ ಪಿಶಾಚಿ ಅಂದ್ರೆ ಬಂದೆ ಗವಾಕ್ಷೀಲಿ'' ಎನ್ನುವ ಗಾದೆಯನ್ನು ಕೆಲವು ಕಡೆ ''ಹೋದ್ಯಾ ಶನೇಶ್ವರ (ಅಥವಾ ಶನಿ) ಅಂದ್ರೆ ಬಂತು ಗವಾಕ್ಷೀಲಿ'' ಎಂದೂ ಹೇಳುವುದುಂಟು. ಆದರೆ, ಅರ್ಥ ಮಾತ್ರ ಒಂದೇ. ಯಾವುದೋ ಆತಂಕ, ವಿಪತ್ತು, ಅವಘಡ, ಅನಾಹುತ, ಅನಿಷ್ಟ ತಪ್ಪಿತು ಸದ್ಯ ಅಂತ ಸಮಾಧಾನ ಪಟ್ಟುಕೊಳ್ಳುವುದರೊಳಗೆ, ಅದೇ ವಿಪತ್ತು ಬೇರೊಂದು ರೂಪದಲ್ಲಿ ಬಂದು ವಕ್ಕರಿಸಿದಾಗ ಈ ಉದ್ಗಾರ ಹೊರಬೀಳುವುದು ಸಾಮಾನ್ಯ ಸಂಗತಿ. ಹಣೆಯ ಬರಹವನ್ನು ತಪ್ಪಿಸಿಕೊಳ್ಳುವುದು ಅಸಾಧ್ಯ ಎಂಬ ಅರ್ಥದಲ್ಲಿಯೂ ಇದನ್ನು ಬಳಸುವುದುಂಟು.

''ಹೋದ್ಯಾ ಪಿಶಾಚಿ ಅಂದ್ರೆ ಬಂದೆ ಗವಾಕ್ಷೀಲಿ'' ಅನ್ನೋ ಗಾದೆ ಈ ಕೊರೊನಾ ಕಾಲದ ಪರಿಸ್ಥಿತಿಗೆ ಹೇಳಿ ಮಾಡಿಸಿದ ಹಾಗಿದೆ. ಆರಾರು ತಿಂಗಳಿಗೊಮ್ಮೆ ಹೊಸ ಹೊಸಾ ರೂಪದಲ್ಲಿ ಪುನಃ ಪುನಃ ವಕ್ಕರಿಸ್ತಾ ಇದೆ ಕೊರೊನಾ ಎಂಬ ಹೆಮ್ಮಾರಿ. (ನಮ್ಮ ನ್ಯೂಸ್ ಚಾನಲ್ಲುಗಳ ವರದಿಗಾರರಿಗಂತೂ ಪಿಶಾಚಿ ಮತ್ತು ಹೆಮ್ಮಾರಿ ಪದಗಳನ್ನ ಎಷ್ಟು ಸಲ ಬಳಸಿದರೂ ಸಾಲದಾಗಿದೆ. ಆ ಚಾನಲ್‌ನವ ಒಂದು ವಾಕ್ಯದಲ್ಲಿ ಎರಡು ಸಲ ಹೇಳಿದರೆ, ಈ ಚಾನಲ್‌ನವ ನಾಲ್ಕು ಸಾರಿ ವದರಿರುತ್ತಾನೆ!) ಮೊದಲಿಗೆ ಸಾಮಾನ್ಯ ಕೊರೊನಾ ವೈರಸ್ ಬಂತು. ಅದಾದ ಮೇಲೆ ಆಲ್ಫಾ, ಬೀಟಾ, ಡೆಲ್ಟಾ, ಏನೇನೋ ಬಂದವು. ಇದೀಗ ಒಮಿಕ್ರಾನ್! ಅಲ್ಲದೇ ಇನ್ನೂ ಯಾವು ಯಾವುದೋ ಅಂಕಿ/ಅಕ್ಷರಗಳ ಕಾಂಬಿನೇಷನ್ನಿನ ರೂಪಾಂತರಗಳು ಸರದಿಯ ಪ್ರಕಾರ ಬರುತ್ತಲೇ ಇವೆ. ಒಂದನೇ ಎರಡನೇ ಮೂರನೇ ಅಲೆ ಎನ್ನುವ ಆಕರ್ಷಕ ಹೆಸರು ಬೇರೆ ಈ ಕಾಯಿಲೆಗೆ! ಒಂದು ಅಲೆ ಬಂದು ಹೋಯ್ತು